ಶ್ರೀ ಎಂ. ನಾಗಪ್ಪ.—ಒಂದು ಎಕರೆಗೆ 1,637 ರೂಪಾಯಿಗಳ ಖರ್ಚು ಬಂದರೆ ಇದನ್ನು ಸರ್ಕಾರದವರು ಒಂದು ಫೀಜಿಬಲ್ಲಾದ ಪ್ರಾಜೆಕ್ಟೆ ಎಂತ ಭಾವಿಸುವರೇ ?

ಶ್ರೀ ಸಿದ್ದಯ್ಯ ಕಾಶೀಮಠ.—ಇದನ್ನು ಕಟ್ಟಿದ ಮೇಲೆ ಎಷ್ಟು ಎಕರೆಗೆ ನೀರನ್ನು ಒದಗಿಸುತ್ತದೆ?

ಶ್ರೀ ವೀರೇಂದ್ರ ಪಾಟೀಲ್.—ಸುಮಾರು 22 ನೂರು ಎಕರೆಗಳಿಗೆ ನೀರು ಹಾಯಬಹುದು. ಆದರೆ ಹೆಚ್ಚಿನ ಅನುಕೂಲ ಕುಷ್ಟಗಿ ಮತ್ತು ಹುನಗುಂದ ತಾಲ್ಲೂಕುಗಳಿಗೆ ಆಗುತ್ತದೆ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—2,200 ಎಕರೆ ನಾಗುವಳಿಗೆ ಬರತಕ್ಕ ಪ್ರಾಜೆಕ್ಟಿಗೆ 36.02 ಲಕ್ಷ ಖರ್ಚಾಗುತ್ತದೆಂದು ಹೇಳಿರುವುದರಿಂದ—ಒಂದು ಎಕರೆಗೆ ಸುಮಾರು 1500 ರೂಪಾಯಿಗಳಿಗಿಂತಲೂ ಹೆಚ್ಚಿನ ಖರ್ಚು ಬರುವುದರಿಂದ ಸರ್ಕಾರದಲ್ಲಿ ಒಂದು ಪ್ರಾಜೆಕ್ಟನ್ನು ಕಟ್ಟತಕ್ಕ ಕಡೆ ಒಂದು ಎಕರೆ ಭೂಮಿಗೆ ತಗಲತಕ್ಕ ಕನಿಷ್ಠ ಮತ್ತು ಗರಿಷ ವೆಚ್ಚವೆಷ್ಟು ?

ಶ್ರೀ ವೀರೇಂದ್ರ ಪಾಟೀಲ್.—ಅದು ಆಯಾಯ ಪ್ರದೇಶದ ಮೇಲೆ ಹೋಗುತ್ತೆ. ಕೆಲವು ಎತ್ತರವಾದ ಪ್ರದೇಶದಲ್ಲಿ ಹೆಚ್ಚು ಖರ್ಚಾಗಬಹುದು, ತಗ್ಗಾದಾದ ಪ್ರದೇಶದಲ್ಲಿ ಕಡಮೆ ವೆಚ್ಚದಲ್ಲಿ ಆಗಬಹುದು. ಆದರೆ ಮಳೆ ಕಡಮೆ ಇರತಕ್ಕ ಪ್ರದೇಶದಲ್ಲಿ ಕಡಿಮೆ ವೆಚ್ಚದಲ್ಲಿ ಪ್ರಾಜೆಕ್ಟ್‌ಗಳನ್ನು ಮಾಡುವುದಕ್ಕಾಗದೆ ಇದ್ದಾಗ ಅಲ್ಲಿ ಕಾಸ್ಟ್ ಹೆಚ್ಚಾಗುತ್ತದೆಂದು ನೀರಾವರಿ ಸೌಲಭ್ಯಗಳನ್ನು ಕೈಬಿಡುವುದಕ್ಕಾಗುವುದಿಲ್ಲ. ಸರ್ಕಾರದವರು ನೀರಾವರಿ ಸೌಲಭ್ಯಗಳನ್ನು ಒದಗಿಸಬೇಕಾದ್ದು ಅವರ ಜವಾಬ್ದಾರಿ.

Sri DIGAMBARA RAO B. KALMANKAR.—Whether it is a fact that the village where this particular irrigation tank is to come up belongs to the Minister for Co-operation ?

Sri VEERENDRA PATIL.—I do not know to which Minister this project or village belongs. But, this is in Hungund Taluk. So far as I know, Hungund Taluk is represented by the Hon'ble Minister, Sri S. R. Kanthi.

ಶ್ರೀ ಎಂ. ನಾಗಪ್ಪ.—ಶ್ರೀಮಾನ್ ಎಚ್. ಎಂ. ಚನ್ನಬಸಪ್ಪನವರು ಹಿಂದೆ ಪಿ.ಡಬ್ಲ್ಯು.ಡಿ. ಮಂತ್ರಿಗಳಾಗಿದ್ದಾಗ ಈ ಪ್ರಾಜೆಕ್ಟ್ ಬಹಳ ಕಾಸ್ಟ್‌ಲಿ ಆಗುತ್ತೆಂದು ಅಲ್ಲಿನ ಇಂಜಿನಿಯರುಗಳು ಸಲಹೆ ಮಾಡಿದ್ದರಿಂದ ಅದನ್ನು ಮಾಡುವುದು ಸರಿಯಲ್ಲವೆಂದು ಅದನ್ನು ಅವರು ಕೈಬಿಟ್ಟಿರಲಿಲ್ಲವೇ ?

ಶ್ರೀ ವೀರೇಂದ್ರ ಪಾಟೀಲ್.—ಆ ವಿಚಾರ ನನಗೆ ಗೊತ್ತಿಲ್ಲ. ಆದರೆ ಈಗಲೂ ಸಹಾ ಇದನ್ನು ಇಂಜಿನಿಯರ ಸಲಹೆಯ ಮೇರೆಗೆ ಕೈಗೊಳ್ಳಲಾಗಿದೆ.

Sri DIGAMBARA RAO B. KALMANKAR.—If the Engineers give the view that it is not an economic project, may I know whether the Government is prepared to give it up ?

Sri VEERENDRA PATIL.—I just now said that we have taken up this project on the technical advice offered by the Engineers. We will think of a project only when the estimates are prepared, and only when the Engineers say that this is a feasible project, we sanction it.

Scheme to Improve Agrahara Tank bed

134. Sri T. R. SHAMANNA (Fort).—

Will the Minister for Home and Municipal Administration be pleased to state :—

(*a*) whether there is a Scheme to improve the Agrahara Tank bed near Binny Mills ;

(*b*) if so, since when it is pending;

(*c*) whether the road connecting Mysore Road and Magadi Road is under use;

(*d*) if not, since when this road is out of use;

(*e*) whether there is any proposal to have a lorry shed at the Agrahara Tank bed; if so, when it will be completed?

A.—**Sri R. M. PATIL** (Minister for Home and Municipal Administration).—

(*a*) Yes.

(*b*) Work is in progress since May, 1966.

(*c*) No.

(*d*) From 5-8-1966.

(*e*) Yes. The work of forming roads in the tank bed is in progress and the lorry parking will be started after the work of roads is completed.

ಶ್ರೀ ಟಿ. ಆರ್. ಶಾಮಣ್ಣ.—ಜನಸಂಚಾರಕ್ಕೆ ಅತಿ ಮುಖ್ಯವಾಗಿ ಇರಬೇಕಾದ ಈ ರಸ್ತೆ ನುಮಾರು 2 ವರ್ಷಗಳಿಂದಲೂ ಏನೂ ಉಪಯೋಗವಾಗದೆ ಜನಗಳಿಗೆ ಬಹಳವಾಗಿ ತೊಂದರೆ ಯಾಗಿಲ್ಲವೇ? ಮತ್ತು ಕಾರ್ಪೊರೇಷನ್ ಆಡಳಿತದಲ್ಲಿ ಇಂತಹ ಲೋಪದೋಷಗಳು ಅವರ ಆಡಳಿತದ ಆಳ್ವಿಕೆಯ ದಕ್ಷತೆಯನ್ನು ಪ್ರತಿಬಿಂಬಿಸುತ್ತದೆ ಎನ್ನುವ ಬಗ್ಗೆ ಮಾನ್ಯ ಮಂತ್ರಿಗಳು ಏನು ಹೇಳುತ್ತಾರೆ?

†ಶ್ರೀ ಆರ್. ಎಂ. ಪಾಟೀಲ್.—ಹಾಗೇನೂ ಜನರಲೈಸ್ ಮಾಡುವುದಕ್ಕಾಗುವುದಿಲ್ಲ. ಈ ಕೆಲಸ ತಡವಾಗಲಿಕ್ಕೆ ಸಕಾರಣಗಳಿವೆ. ಒಂದನೇ ಕಾರಣ, ಇಲ್ಲಿ ವಾಟರ್ ಮೇನ್ ಹೋಗುತ್ತಿದೆ. ಅದನ್ನು ಷಿಫ್ಟ್ ಮಾಡಬೇಕಾಗಿತ್ತು. ಮತ್ತು ಟೆಲಿಗ್ರಾಫ್ ಪೋಸ್ಟ್ಸ್ ಬೇರೆ ಇವೆ. ಅವನ್ನು ಷಿಫ್ಟ್ ಮಾಡಬೇಕಾಗುತ್ತದೆ. ಈ ರೀತಿಯಾದ ಬೇರೆಬೇರೆ ಇಲಾಖೆಗಳ ಕೆಲಸಗಳಿದ್ದುದರಿಂದ ಸ್ವಲ್ಪ ತಡವಾಗಿದೆ. ಇನ್ನು ಸ್ವಲ್ಪ ದಿವಸಗಳೊಳಗೆ ಕೆಲಸಗಳು ಪ್ರಾರಂಭವಾಗುತ್ತವೆ.

ಶ್ರೀ ಎಂ. ಎಸ್. ಕೃಷ್ಣನ್.—ಈ ರಸ್ತೆಗೆ ಅಂದಾಜು ಖರ್ಚು ಎಷ್ಟಾಗುತ್ತದೆ?

ಶ್ರೀ ಆರ್. ಎಂ. ಪಾಟೀಲ್.—ಈ ರಸ್ತೆ ನಿರ್ಮಾಣದ ಅಂದಾಜು ಖರ್ಚು ಹೇಳುವುದಕ್ಕೆ ಅದರ ಮಾಹಿತಿ ನನ್ನ ಕಡೆ ಇಲ್ಲ. ಅದಕ್ಕೆ ನೋಟೀಸ್ ಬೇಕು.

ಶ್ರೀ ಟಿ. ಆರ್. ಶಾಮಣ್ಣ.—ನಾನು ಈ ಬೆಳಿಗ್ಗೆಯೇ ನೋಡಿದೆ. ಅಲ್ಲಿ ಕಸದ ರಾಶಿಗಳು ಹೋಗಿ ಕಸ ಹಾಕುವುದನ್ನು ಬಿಟ್ಟರೆ ಮತ್ತೆ ಬೇರೆ ಏನೂ ಕೆಲಸವೂ ಅಲ್ಲಿ ನಡೆದಿಲ್ಲ. ಅಲ್ಲಿ ರಾಶಿ ಷೆಡ್ ಮಾಡಬೇಕೆಂದು ಇರುವುದರಿಂದ ಮುಂಡಿ ಪೇಟೆಗಳಲ್ಲಿ ರಾಶಿಗಳ ಹಾವಳಿಯನ್ನು ತಪ್ಪಿಸುವುದಕ್ಕೆ ಮತ್ತು ಕಾರ್ಪೊರೇಷನ್ನಿನ ವರಮಾನವನ್ನು ಹೆಚ್ಚಿಸುವುದಕ್ಕೆ ಸಾಧ್ಯವಾಗುವುದಿಲ್ಲವೇ? ಈ ಕೆಲಸವನ್ನೂ ಮತ್ತು ರಸ್ತೆ ಕೆಲಸವನ್ನೂ ಒಂದೇಸಾರಿ ಜೊತೆಯಲ್ಲೇ ತೆಗೆದುಕೊಳ್ಳುವುದಕ್ಕೆ ಈಗಲೇ ಭರವಸೆಯನ್ನು ಕೊಡುತ್ತೀರಾ?

ಶ್ರೀ ಆರ್. ಎಂ. ಪಾಟೀಲ್.—ಈ ರಸ್ತೆಯಾದಕೂಡಲೇ ಇದರ ಮುಖಾಂತರವೇ ಅಲ್ಲಿನ ಪ್ರದೇಶವನ್ನು ಅಭಿವೃದ್ಧಿಮಾಡುವುದಕ್ಕೆ ಹೊಸದಾಗಿ ಮಣ್ಣು ತೂರಬೇಕಾಗಿದೆ. ಆದ್ದರಿಂದ ಈ ರಸ್ತೆಯ ಅವಶ್ಯಕತೆ ಬಹಳವಾಗಿ ಇದೆ. ಅಲ್ಲಿ 23 ಎಕರೆಯಷ್ಟು ಜಮೀನು ಇದೆ.

ಶ್ರೀ ಎಂ. ನಾಗಪ್ಪ.—ಈ ರಸ್ತೆ ಯೋಜನೆಯನ್ನು ಕೈಗೊಂಡಿದ್ದು ಯಾವಾಗ? ಎಷ್ಟು ವರ್ಷಗಳಾದುವು?

ಶ್ರೀ ಆರ್. ಎಂ. ಪಾಟೀಲ್.—ಇದು ಬಹಳ ವರ್ಷಗಳಿಂದಲೂ ಇದೆ. ಆದರೆ ಈಗ ಇಷ್ಟೇ ವರ್ಷಗಳೆಂದು ಹೇಳುವುದಕ್ಕಾಗುವುದಿಲ್ಲ. ಕಾರ್ಪೊರೇಷನ್ನಿನವರು ಇದುವರೆಗೆ ಒಂದಲ್ಲ ಒಂದು ನೆವದಿಂದ ಈ ಯೋಜನೆಯನ್ನು ಮುಂದೆ ಹಾಕುತ್ತಿದ್ದರು.

ಶ್ರೀ ಎಂ. ಎಸ್. ಕೃಷ್ಣನ್.—ಈ ಯೋಜನೆ ಮುಗಿಯಬೇಕಾದರೆ ಇನ್ನು ಎಷ್ಟು ವರ್ಷಗಳು ಬೇಕಾಗುತ್ತದೆ ?

ಶ್ರೀ ಆರ್. ಎಂ. ಪಾಟೀಲ್.—ಬಹಳ ಕಾಲ ಏನೂ ಇಲ್ಲ. ಒಂದು ಅಥವಾ ಎರಡು ತಿಂಗಳುಗಳು ಆಗಬಹುದು.

ಶ್ರೀ ಎನ್. ಚಿಕ್ಕೇಗೌಡ.—ಈ ಕೆರೆಯ ಅಂಗಳದ ಪ್ರದೇಶವನ್ನು ಕೆಲವು ಸಂಸ್ಥೆಗಳಿಗೆ ಕೊಟ್ಟಿದ್ದೀರಿ ; ಯಾರ್ಯಾರಿಗೆ ಎಷ್ಟೆಷ್ಟು ಕೊಟ್ಟಿದ್ದೀರಿ ?

ಶ್ರೀ ಆರ್. ಎಂ. ಪಾಟೀಲ್.—ಬಿನ್ನಮಿಲ್‌ನವರಿಗೆ 4 ಎಕರೆ, ರೆಗ್ಯುಲೇಟೆಡ್ ಮಾರ್ಕೆಟ್ ಕಮಿಟಿಯವರಿಗೆ 5 ಎಕರೆ ಕೊಡುವ ಪ್ರೊಪೋಸಲ್ ಇದೆ. ವೇರ್‌ಹೌಸ್ ಕಾರ್ಪೊರೇಷನ್ನಿನವರಿಗೆ ಒಂದೂವರೆ ಎಕರೆ, ಲಾರಿ ಪಾರ್ಕಿಂಗ್ ಏರಿಯಾಕ್ಕೆ ನಾಲ್ಕುವರೆ ಎಕರೆ, ಕೆರೆಯ ಅಂಗಳದ ಏರಿಯಾದಲ್ಲಿರತಕ್ಕ ಸಂಸ್ಥೆಗಳಿಗೆ 6 ಎಕರೆ, ಪಾರ್ಕ್‌ಗೆ 2 ಎಕರೆ—ಈ ರೀತಿ 23 ಎಕರೆಯ ಯೋಜನೆ ಇದೆ.

ಶ್ರೀ ಟಿ. ಆರ್. ಶಾಮಣ್ಣ.—ಈ ಕೆರೆಯ ಅಂಗಳದ ಹತ್ತಿರ ಒಂದು ಟಿಂಬರ್ ಯಾರ್ಡ್ ಇದೆ. ಅದನ್ನು ಖಾಲಿಮಾಡಿಸಬೇಕೆಂದು ಅನೇಕ ವರ್ಷಗಳಿಂದಲೂ ನಡೆವಳಿಕೆ ನಡೆದಿದೆ. ಇದನ್ನು ತೆಗೆದು ಕೊಂಡು ಒಂದು ಸಮಗ್ರವಾದ ಯೋಜನೆಯನ್ನು ಮಾಡಿ ಅದಷ್ಟುಜಾಗ್ರತೆ ಇದರ ಬಗ್ಗೆ ತಕ್ಕ ಕ್ರಮವನ್ನು ತೆಗೆದುಕೊಳ್ಳುತ್ತೀರಾ ?

ಶ್ರೀ ಆರ್. ಎಂ. ಪಾಟೀಲ್.—ಟಿಂಬರ್ ಯಾರ್ಡ್ ಷಿಫ್ಟ್ ಮಾಡುವ ಯೋಚನೆ ಇದೆ. ಆದರೆ ಅಲ್ಲಿ ಟ್ರಸ್ಟ್‌ಬೋರ್ಡಿನವರು ಜಮೀನನ್ನು ಕೊಟ್ಟಿದ್ದಾರೆ. ಅವರು ಯಾವ ತರಹ ಸೌಕರ್ಯಗಳು ಬೇಕೋ ಆರೀತಿಯಾಗಿ ಕೊಟ್ಟಿದ್ದಾರೆ. ಇನ್ನೂ ಸ್ವಲ್ಪ ಕೆಲಸಗಳು ಬಾಕಿ ಉಳಿದಿವೆ. ಅವು ಆದ ಕೂಡಲೆ ಈ ವಿಷಯವನ್ನು ತೆಗೆದುಕೊಳ್ಳಬೇಕಾಗುತ್ತದೆ. ಈಗ ಅಲ್ಲಿಂದ ಈ ಟಿಂಬರ್ ಡಿಪೋ ಎಲ್ಲವನ್ನೂ ಷಿಫ್ಟ್ ಮಾಡಲಕ್ಕೆ ಫೈನಾನ್ಷಿಯರ್ ಅಸಿಸ್ಟೆನ್ಸ್ ಬೇಕು ಎಂಬುದಾಗಿ ಒಂದು ವಾದವಿದೆ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಅಗ್ರಹಾರ ಕೆರೆಯ ಅಂಗಳವನ್ನು ಉತ್ತಮಪಡಿಸುವ ಯೋಜನೆಯಲ್ಲಿ ಕೆಲವು ಪ್ರದೇಶಗಳನ್ನು ಸಾರ್ವಜನಿಕ ಕ್ಷೇತ್ರಗಳಿಗೆ ಕೊಡುತ್ತಿದ್ದೀರಿ. ಆದರೆ ಅಂಗಳದ ಪಕ್ಕದಲ್ಲಿರುವ ಸ್ಲಂಡ್ವೆಲ್ಲರ್ಸ್ ಸಾಏರಿಯಾರು ಜನ ಅಲ್ಲಿ ವಾಸಮಾಡುತ್ತಿದ್ದಾರೆ. ಅಂದಮೇಲೆ ನೀವು ಈ ಯೋಜನೆಯನ್ನು ಅಲ್ಲಿ ಅಳವಡಿಸುವಾಗ ಅಂತಹವರಿಗೆ ತೊಂದರೆಯಾದರೆ ಅವರಿಗೆ ಇನ್ನು ಎರ್ಯಾದರೂ ಜಾಗ ಕೊಟ್ಟು ವ್ಯವಸ್ಥೆಮಾಡುವ ನೀತಿಯನ್ನು ಮೊದಲೇ ಯೋಚನೆಮಾಡಿದ್ದೀರಾ ಅಥವಾ ಇನ್ನೂ ಏನೂ ಮಾಡಿಲ್ಲವೋ ?

ಶ್ರೀ ಆರ್. ಎಂ. ಪಾಟೀಲ್.—ಅಲ್ಲರತಕ್ಕ ಸ್ಲಂಡ್ವೆಲ್ಲರ್ಸ್ ಬೇರೆ ಕಡೆಗೆ ಹೋಗಬೇಕು. ಅಲ್ಲಿನ ಏರಿಯಾವನ್ನು ಅಭಿವೃದ್ಧಿಗೆ ತರಬೇಕಾಗಿರುವುದರಿಂದ ಈ ಕೆರೆಯ ಅಂಗಳದಲ್ಲಿ ಅವರಿಗೆ ಜಾಗವನ್ನು ಮಾಡಿಕೊಡುವುದಕ್ಕಾಗುವುದಿಲ್ಲ.

ಶ್ರೀ ಸಿದ್ದಯ್ಯ ಕಾಶೀಮಠ.—ಈ ರಸ್ತೆಯ ನಿರ್ಮಾಣಕ್ಕೆ ಬೇಕಾದಂತಹ ಹಣವನ್ನು ಸರ್ಕಾರದವರು ಕೊಡುತ್ತಾರೆಯೇ ಅಥವಾ ಕಾರ್ಪೋರೇಷನ್ನಿನವರು ಕೊಡುತ್ತಾರೆಯೇ ?

ಶ್ರೀ ಆರ್. ಎಂ. ಪಾಟೀಲ್.—ಅದನ್ನು ಕಾರ್ಪೋರೇಷನ್ನಿನವರು ಕೊಡುತ್ತಾರೆ. ಈಗ ಕೆಲವು ಸಂಸ್ಥೆಗಳಿಗೆ ಜಾಗ ಮಾರಿದ್ದರಿಂದ ಬರುವ ಹಣವನ್ನು ಕಾರ್ಪೋರೇಷನ್ನಿನವರು ತೆಗೆದುಕೊಳ್ಳುತ್ತಾರೆ.

ಶ್ರೀ ಪಿ. ತಮ್ಮಯ್ಯ.—ಈ ಕೆಲಸಗಳು ನಿಧಾನವಾಗುವುದರಿಂದ ವರ್ಷ ವರ್ಷ ಎಸ್ಟಿಮೇಟ್ ರಿವೈಸ್ ಆಗಿ ಕಾರ್ಪೋರೇಷನ್ನಿಗೆ ಹೆಚ್ಚಿಗೆ ಹಣ ಖರ್ಚೂ ಆಗಿ ಜನಗಳಿಗೆ ತೊಂದರೆಯಾಗುತ್ತಾ ಇರುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಆರ್. ಎಂ. ಪಾಟೀಲ್.—ಸ್ವಾಭಾವಿಕವಾಗಿ ಆಗುವುದು. ಎಲ್ಲ ಹ್ಯೂಮನ್ ರೈಟ್ಸ್ ಇನ್‌ವಾಲ್ವ್ ಆಗುತ್ತದೆಯೋ ಅಂಥಾ ಕಡೆ ಈ ಪ್ರಶ್ನೆ ಉದ್ಭವವಾಗುತ್ತದೆ. ಖರ್ಚೂ ಹೆಚ್ಚು ಬರುತ್ತದೆ. ಆದರೆ ಖರ್ಚು ಹೆಚ್ಚು ಬರುತ್ತದೆ ಎಂದು ಯೋಜನೆಗಳನ್ನು ಬಿಡುವುದಕ್ಕಾಗುವುದಿಲ್ಲ.

Sri DIGAMBARA RAO B. KALMANKAR.—So far as the road that is in progress, may I know, the progress that has been made and the time within which the progress was achieved and how much time will be required to complete the remaining road ?

Sri R. M. PATIL.—As regards the time required to complete the road, I think, I have already answered. It will be completed within a month or two and to what extent the progress has been achieved, it cannot be said in words now.

ಶ್ರೀ ಎಂ. ಎಸ್. ಕೃಷ್ಣನ್.—ಆ ಪ್ರದೇಶದಲ್ಲಿ ಬಿನ್ನಮಿಲ್ಲಗೆ ಮತ್ತು ರೆಗ್ಯುಲೇಟೆಡ್ ಮಾರ್ಕೆಟಿಂಗ್ ಸೊಸೈಟಿಗೆ ಜಾಗವನ್ನು ಕೊಡಬೇಕೆಂದು ಮಾಡಿದ್ದೇವೆಂದು ಹೇಳಿದಿರಿ ಬಿನ್ನಮಿಲ್ಲಗೆ ಯಾವ ಕಾರಣಕ್ಕಾಗಿ ಅಲ್ಲ ಜಾಗವನ್ನು ಕೊಡಬೇಕೆಂದು ಯೋಚನೆ ಮಾಡಿದ್ದೀರಿ ?

ಶ್ರೀ ಆರ್. ಎಂ. ಪಾಟೀಲ್.—ಅದನ್ನು ಎಕ್ಸ್‌ಪ್ಯಾನ್‌ಷನ್ ಮಾಡಬೇಕೆಂದು ಕೊಟ್ಟಿದ್ದೇವೆ.

High Level Channel to the Hemavathi Project

135. Sri H. N. NANJE GOWDA (Arkalgud).—

Will the Minister for Public Works be pleased to state:—

(*a*) whether any representations have been received by the Government for the construction of 'High Level Channel' to the Southern side of the Hemavathi Project, Gorur, to feed the areas (Famine areas) of Arkalgud, Holenarasipur and other Taluks ;

(*b*) whether they would examine this proposal and take up the construction of the Channel early ?

A.—Sri VEERENDRA PATIL (Minister for Public Works).—

(*a*) Yes.

(*b*) The proposal is under investigation.

Sri H. N. NANJE GOWDA.—You have said in answer to (b) that the proposal is under investigation ? May I know the stage of investigation ?

†Sri VEERENDRA PATIL.—It is still in the preliminary stage.

ಶ್ರೀ ಎಚ್. ಡಿ. ದೇವೇಗೌಡ.—ಹೇಮಾವತಿ ಯೋಜನೆಯ ದಕ್ಷಿಣ ಭಾಗದಲ್ಲಿ ಒಂದು ಹೈ ಲೆವೆಲ್ ಕೆನಾಲ್ ಮಾಡಬೇಕೆಂದು ಮನವಿಗಳು ಬಂದಿವೆಯೆಂದು ತಿಳಿಸಿದ್ದೀರಿ, ಹಿಂದೆ ಹಾರಂಗಿ ಅಣೆಕಟ್ಟಿಗೆ ಒಂದು ಪಿಕ್‌ಅಪ್ ಹಾಕಬೇಕೆಂಬ ಅಭಿಪ್ರಾಯ ಇತ್ತು, ಆಮೇಲೆ ಹಾರಂಗಿ ಅಣೆಕಟ್ಟು ಕಟ್ಟುವುದನ್ನು ಪುನರ್‌ವಿಮರ್ಶೆ ಮಾಡಿ ಆ ಅಣೆಕಟ್ಟಿನ ಎತ್ತರವನ್ನು ಕಡಿಮೆ ಮಾಡುವುದರಿಂದ ಅರಕಲಗೂಡು ಮತ್ತು ಹೊಳೆನರಸೀಪುರದ ಪ್ರದೇಶಗಳಿಗೆ ಹೋಗತಕ್ಕಂಥ ನವಲತ್ತು ಕಳೆದು ಹೋಗಿದೆ. ಆದ್ದರಿಂದ ಈ ಹೈಲೆವೆಲ್ ಕೆನಾಲ್ ಅನ್ನು ಯಾವ ತರಹ ಮಾಡಿದರೆ ಆ ಎರಡು ಪ್ರದೇಶಗಳಿಗೂ ಅನುಕೂಲವಾಗುತ್ತದೆ ಎಂಬುದನ್ನು ತಿಳಿದು ಅದನ್ನು ಸರ್ಕಾರದವರು ಮಾಡುತ್ತಾರೆಯೇ, ಮತ್ತು ಆ ಎರಡು ಏರಿಯಾಗಳೂ ಕ್ಷಾಮಪೀಡಿತ ಪ್ರದೇಶವೆಂದು ಸರ್ಕಾರದವರಿಗೆ ಗೊತ್ತಿರುವುದರಿಂದ ಅಲ್ಲಿಗೆ ನೀರು ಒದಗಿಸುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ಆ ಯೋಜನೆಯ ಸೆಕೆಂಡ್ ಸ್ಟೇಜ್ ಪ್ರಾಜೆಕ್ಟ್ ಕಟ್ಟುವಾಗ ಅಲ್ಲಿ ಹೈ ಲೆವೆಲ್ ಕೆನಾಲ್ ಮಾಡಿ ನೀರಾವರಿ ಅನುಕೂಲತೆಯನ್ನು ಒದಗಿಸಿಕೊಡಬೇಕೆಂಬ ಸಲಹೆ ಇದೆ. ಈಗ ಫಸ್ಟ್ ಸ್ಟೇಜ್ ಪ್ರಾಜೆಕ್ಟ್ ಕಟ್ಟುವುದಕ್ಕೆ ಪ್ರಾರಂಭ ಮಾಡಿದ್ದಾರೆ. ಸೆಕೆಂಡ್ ಸ್ಟೇಜ್ ಪ್ರಾಜೆಕ್ಟ್ ಕಟ್ಟುವುದಕ್ಕೆ ಇನ್ನೂ ಕಾಲಾವಕಾಶ ಇರುವುದರಿಂದ, ಅದಕ್ಕೆ ಮೂರು ಆಲ್ಟರ್‌ನೇಟೀವ್ ಇದೆ. ಅದನ್ನು ಡೀಟೈಲಾಗಿ ವರ್ಕ್‌ಔಟ್ ಮಾಡಿ, ಅದರ ಅಂದಾಜನ್ನು ತಯಾರು ಮಾಡಿ ಅದರ ಬಗ್ಗೆ ಅಂತಿಮ ನಿರ್ಣಯವನ್ನು ತೆಗೆದುಕೊಳ್ಳುತ್ತೇವೆ.